# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 703 |
| ಸದಸ್ಯರ ಹೆಸರು | ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ. (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 12.07.2023 |
| ಉತ್ತರಿಸಬೇಕಾದ ಸಚಿವರು | ಕಂದಾಯ ಸಚಿವರು |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಡ್ರೋಣ್ ಮೂಲಕ ಆಸ್ತಿ ಸಮೀಕ್ಷೆ ನಡೆಸಿ, ಡಿಜಿಟಲೀಕರಣ ಮಾಡುವ ಕಾರ್ಯ ಯಾವ ಹಂತದಲ್ಲಿದೆ; | ರಾಜ್ಯದ 21 ಜಿಲ್ಲೆಗಳಲ್ಲಿ(5 ಜಿಲ್ಲೆಗಳು ಭಾರತೀಯ ಸರ್ವೇಕ್ಷಣಾ ಸಂಸ್ಥೆಯ ಸಹಯೋಗ ಮತ್ತು 16 ಜಿಲ್ಲೆಗಳು ಖಾಸಗಿ ಸಹಭಾಗಿತ್ವ ದೊಂದಿಗೆ) ಡ್ರೋಣ್ ಮೂಲಕ ಸರ್ವೆ ಕಾರ್ಯ ಕೈಗೊಳ್ಳಲಾಗುತ್ತಿದೆ. |
| ಆ) | ಸರ್ಕಾರಿ, ಖಾಸಗಿ ಹಾಗೂ ಸಾರ್ವಜನಿಕ ಆಸ್ತಿಗಳ ಸಮಗ್ರ ಸಮೀಕ್ಷೆ ನಡೆಸುವ ಈ ಕಾರ್ಯಕ್ಕೆ ಎಷ್ಟು ಅನುದಾನ ಒದಗಿಸ ಲಾಗಿದೆ; | ಕೇಂದ್ರ ಸರ್ಕಾರದಿಂದ ಡಿ.ಐ.ಎಲ್.ಆರ್.ಎಂ.ಪಿ ಯೋಜನೆ ಯಡಿಯಲ್ಲಿ 5 ಜಿಲ್ಲೆಗಳ ಮರುಭೂಮಾಪನ ಕಾರ್ಯಕ್ಕೆ ರೂ 24.51 ಕೋಟಿಗಳ ಅನುದಾನವನ್ನು ಒದಗಿಸಲಾಗಿದೆ. ರಾಜ್ಯಸರ್ಕಾರ ದಿಂದ 2023-24 ನೇ ಆಯವ್ಯಯದಲ್ಲಿ ರೂ.100 ಕೋಟಿಗಳನ್ನು ಮಂಜೂರು ಮಾಡಲಾಗಿದೆ. |
| ಇ) | ಡ್ರೋಣ್ ಮೂಲಕ ಆಸ್ತಿ ಸಮೀಕ್ಷೆ ನಡೆಸಿ, ಡಿಜಿಟಲೀಕರಣ ಮಾಡುವ ಕಾರ್ಯವನ್ನು ಪ್ರಾಯೋಗಿಕವಾಗಿ ಎಷ್ಟು ಜಿಲ್ಲೆಗಳಲ್ಲಿ ಜಾರಿಗೊಳಿಸ ಲಾಗಿದೆ; ಹಾಗೂ ಸದರಿ ಜಿಲ್ಲೆ ಯಲ್ಲಿ ಈಗಾಗಲೇ ಈ ಕಾರ್ಯ ಪೂರ್ಣಗೊಂಡಿದೆಯೇ; | ಡ್ರೋಣ್ ಮೂಲಕ ಜನವಸತಿ ಪ್ರದೇಶದ ಆಸ್ತಿಗಳ ಸಮೀಕ್ಷೆ ನಡೆಸಿ, ಹಕ್ಕು ದಾಖಲೆಗಳನ್ನು ವಿತರಿಸುವ ಯೋಜನೆಯ ಜಿಲ್ಲಾವಾರು ಪ್ರಗತಿ ವಿವರವನ್ನು ಅನುಬಂಧದಲ್ಲಿ ನೀಡಿದೆ. |
| ಈ) | ಯಾವ ಕಾಲಮಿತಿಯೊಳಗೆ ಡ್ರೋಣ್ ಮೂಲಕ ಆಸ್ತಿ ಸಮೀಕ್ಷೆ ನಡೆಸಿ, ಡಿಜಿಟಲೀಕರಣ ಮಾಡುವ ಕಾರ್ಯವನ್ನು ರಾಜ್ಯ ದಲ್ಲಿ ಪೂರ್ಣಗೊಳಿಸಲಾಗುವುದು ಹಾಗೂ ಇದರಿಂದ ಸಾರ್ವಜನಿಕ ರಿಗೆ ಆಗುವ ಉಪಯೋಗಗಳ ವಿವರ ನೀಡುವುದು? | ಮಾರ್ಚ್ 2024 ರೊಳಗೆ ಡ್ರೋಣ್ ಹಾರಾಟ ಕಾರ್ಯವನ್ನು ಪೂರ್ಣಗೊಳಿಸಲು ಮತ್ತು ಸೆಪ್ಟೆಂಬರ್ 2024 ರೊಳಗೆ ಹಕ್ಕುದಾಖಲೆ ಸಿದ್ಧಪಡಿಸಲು ಉದ್ದೇಶಿಸಲಾಗಿದೆ.<br>ಡ್ರೋಣ್ ಸರ್ವೆ ಕಾರ್ಯದಿಂದ ಸಾರ್ವಜನಿಕರಿಗೆ ಈ ಕೆಳಕಂಡ ಉಪಯೋಗಗಳಾಗುತ್ತವೆ:<br>1. ಸಾರ್ವಜನಿಕರಿಗೆ ಡಿಜಿಟಲ್ ಮಾಧ್ಯಮದಲ್ಲಿ ಹಕ್ಕುದಾಖಲೆ ಗಳು ಲಭ್ಯವಾಗುತ್ತದೆ.<br>2. ಇದರಿಂದ ಸೃಜಿಸಲಾದ ದಾಖಲೆಗಳ ನಿಖರವಾದ ವಸ್ತುನಿಷ್ಠ ಹಾಗೂ ದೋಷಮುಕ್ತ ಡಿಜಿಟಲ್ ಹಾಗೂ ಜಿಯೋ ರೆಫರೆನ್ಸ್ಡ್ ನಕ್ಷೆಗಳಾಗಿರುತ್ತವೆ.<br>3. ಇದರಿಂದ ವ್ಯಾಜ್ಯ ರಹಿತ ಸಮಾಜದ ನಿರ್ಮಾಣ ವಾಗುತ್ತದೆ.<br>4. ವಿವಿಧ ಇಲಾಖೆಗಳ ಮಾಹಿತಿಕೋಶಗಳ ಸಂಯೋಜನೆ ಯಿಂದ ಸಾರ್ವಜನಿಕರು ವಿವಿಧ ಸೇವೆ ಕೋರಿ ಅನಗತ್ಯ ಅಲೆದಾಟ ತಪ್ಪಿಸುತ್ತದೆ. |

ಸಂಖ್ಯೆ: ಕಂಇ 113 ಎಸ್‌ಎಸ್‌ಸಿ 2023

(ಕೃಷ್ಣ ಬೈರೇಗೌಡ)
ಕಂದಾಯ ಸಚಿವರು

# ರಾಜ್ಯದಲ್ಲಿ ಡ್ರೋಣ್ ಸರ್ವೆ ಕಾರ್ಯದ ಪ್ರಗತಿ (ಅನುಬಂಧ-1)

| ಕ್ರ. ಸ | ಜಿಲ್ಲೆಯ ಹೆಸರು | ಡ್ರೋಣ್ ಹಾರಾಟ ಪೂರ್ಣಗೊಂಡ ಗ್ರಾಮಗಳು | ORI ನಕ್ಷೆ ಸ್ವೀಕೃತ ವಾದ ಗ್ರಾಮಗಳು | ಸ್ಥಳ ಪರಿಶೀಲನೆ ಪೂರ್ಣಗೊಂಡಿರುವ ಗ್ರಾಮಗಳು | ಡಿಜಟಲೀಕರಣ ಪೂರ್ಣಗೊಂಡ ಗ್ರಾಮಗಳು | ಕರಡು ಆಸ್ತಿ ಪ್ರಕಟಣಾ ಪತ್ರ |
|---|---|---|---|---|---|---|
| 1 | ಹಾಸನ | 1450 | 459 | 475 | 472 | 471 |
| 2 | ತುಮಕೂರು | 1041 | 618 | 456 | 435 | 335 |
| 3 | ರಾಮನಗರ | 802 | 801 | 716 | 677 | 604 |
| 4 | ದಾವಣಗೆರೆ | 385 | 147 | 147 | 147 | 147 |
| 5 | ದಕ್ಷಿಣ ಕನ್ನಡ | 82 | 82 | 80 | 80 | 80 |
| 6 | ಮೈಸೂರು | 362 | 362 | 361 | 361 | 361 |
| 7 | ಬೆಳಗಾಂ | 87 | 87 | 87 | 87 | 87 |
| 8 | ಧಾರವಾಡ | 42 | 42 | 42 | 42 | 42 |
| 9 | ಗದಗ | 87 | 17 | 17 | 17 | 17 |
| 10 | ವಿಜಯಪುರ | 190 | 53 | 53 | 53 | 53 |
| 11 | ಕಲಬುರಗಿ | 176 | 176 | 176 | 176 | 176 |
| 12 | ಕೊಪ್ಪಳ | 157 | 80 | 80 | 80 | 79 |
| 13 | ರಾಯಚೂರು | 299 | 104 | 102 | 102 | 101 |
| 14 | ಯಾದಗಿರಿ | 153 | 29 | 29 | 29 | 29 |
| 15 | ಚಾಮರಾಜನಗರ | 231 | 10 | 0 | 0 | 0 |
| 16 | ಚಿಕ್ಕಮಗಳೂರು | 381 | 0 | 0 | 0 | 0 |
| 17 | ಕೋಲಾರ | 499 | 10 | 0 | 0 | 0 |
| 18 | ಚಿಕ್ಕಬಳ್ಳಾಪುರ | 303 | 30 | 0 | 0 | 0 |
| 19 | ಚಿತ್ರದುರ್ಗ | 213 | 2 | 0 | 0 | 0 |
| 20 | ಬಳ್ಳಾರಿ | 77 | 0 | 0 | 0 | 0 |
| 21 | ಕೊಡಗು | 0 | 0 | 0 | 0 | 0 |
| ಒಟ್ಟು | | **7,017** | **3,109** | **2,821** | **2,758** | **2,582** |